**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 32 ಗ್ರಾನೀಸ (2) 2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 1.4.2013

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

Important / Urgent Please

**ಇವರಿಗೆ:**

1. ಮುಖ್ಯ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ,
ನಂ.55, 4ನೇ ಮಹಡಿ, ಅಭಯ ಸಂಕೀರ್ಣ,
ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, **ಬೆಂಗಳೂರು-20.**

**2. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.**

ಮಾನ್ಯರೆ,

ವಿಷಯ: 2013-14ನೇ ಸಾಲಿನ ಗ್ರಾನೀಸ ಯೋಜನೆಗಳ ಕ್ರಿಯಾ ಯೋಜನೆ ರೂಪಿಸುವ ಕುರಿತು.

---

**2013-14ರ** ಸಾಲಿಗೆ ಚಾಲ್ತಿಯಲ್ಲಿರುವ NRDWP ಮಾರ್ಗಸೂಚಿಗಳನ್ವಯ ಸ್ಥಳೀಯ ವಾಸ್ತವಿಕ ಅಗತ್ಯತೆ ಆಧರಿಸಿ, ಗ್ರಾಮೀಣ ನೀರು ಸರಬರಾಜು ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆಯನ್ನು **(Appendix-E)** ಸಿದ್ಧಪಡಿಸಲು ಎಲ್ಲಾ ಜಿಲ್ಲಾ ಪಂಚಾಯತಿಗಳು ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಆದ್ಯತಾ ಕ್ರಮ ವಹಿಸಲು ಕೋರಿದೆ.

- 2012-13ರ ಸಾಲಿನ ಸಾಮಾನ್ಯ ಕ್ರಿಯಾ ಯೋಜನೆಯಡಿ ಹಾಗೂ ತುರ್ತು ಕ್ರಿಯಾ ಯೋಜನೆಯಡಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿದ್ದು, ಮುಂದುವರಿದಿರುವ ಎಲ್ಲಾ ಕಾಮಗಾರಿಗಳನ್ನು ಸಮರ್ಪಕವಾಗಿ ಅಳವಡಿಸಬೇಕು. ಇದರಲ್ಲಿ ಯಾವುದೇ ಕಾಮಗಾರಿ ಬಿಟ್ಟುಹೋದಲ್ಲಿ 2013-14ರ ಸಾಲಿನಲ್ಲಿ ಬಿಲ್ ಪಾವತಿಗೆ ಅವಕಾಶವಿರುವುದಿಲ್ಲ.
- 2012-13ರಲ್ಲಿ ಕೈಗೊಂಡಿರುವ ನೀರು ಸರಬರಾಜು ಪ್ರಮಾಣ ಮತ್ತು ನೀರಿನ ಗುಣಮಟ್ಟದ ಸಮೀಕ್ಷಾ ವರದಿಯ ಧೃಢೀಕೃತ ಅಂಕಿಅಂಶಗಳನ್ನು ಆಧರಿಸಿ, **ಕೆಳಕಂಡ ಆದ್ಯತೆಯಲ್ಲಿ** ಅರ್ಹ ಜನವಸತಿಗಳನ್ನು ಮಾತ್ರ ಅಳವಡಿಸಬೇಕು.

  (i) <25% coverage ಮತ್ತು ಅಧಿಕ ಫ್ಲೋರೈಡ್ & ಆರ್ಸೆನಿಕ್ ಸಮಸ್ಯೆಗೊಳಗಾಗಿರುವ ಜನವಸತಿಗಳು.

  (ii) <50% coverage (iii) <75% coverage ಮತ್ತು ಆನಂತರದಲ್ಲಿ (iv) <100% coverage.

- **55LPCD** ಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆಯಿರುವ ಜನವಸತಿಗಳನ್ನು **ಮಾತ್ರ 100% coverageಯೆಂದು** ಪರಿಗಣಿಸಬೇಕು.
- ಹೊರಗುತ್ತಿಗೆ ಮುಖೇನ MVS ಯೋಜನೆಗಳಿಗೆ ಸೂಕ್ತ O&M ವ್ಯವಸ್ಥೆ ಮಾಡಲು ಅಗತ್ಯವಿರುವ ಅನುದಾನವನ್ನು ಕ್ರಿಯಾ ಯೋಜನೆಯಡಿ ಅಳವಡಿಸಬೇಕು.
- Bulk Water Metering ಹಾಗೂ ಕೌಟುಂಬಿಕ ನೀರಿನ ಸಂಪರ್ಕ ಸಂಬಂಧ ಅಗತ್ಯವಿರುವ ಕಾಮಗಾರಿ ಮತ್ತು ಅನುದಾನ ಒದಗಿಸಬೇಕು.
- ಎಲ್ಲಾ ಜನವಸತಿಗಳಲ್ಲಿರುವ **ಸರ್ಕಾರಿ ಗ್ರಾಮೀಣ ಶಾಲೆಗಳು ಮತ್ತು ಅಂಗನವಾಡಿ ಕೇಂದ್ರಗಳಿಗೆ** ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಗಾಗಿ ಅಗತ್ಯವಿರುವ ಕಾಮಗಾರಿಗಳನ್ನು ಅಳವಡಿಸಿ, ಸಂಪೂರ್ಣ ಅನುದಾನ ಒದಗಿಸಬೇಕು.
- **ನಿರ್ಮಲ ಭಾರತ ಅಭಿಯಾನದಡಿ** ನಿರ್ಮಲ ಗ್ರಾಮ ಪುರಸ್ಕಾರ್ ಪಡೆದಿರುವ ಜನವಸತಿಗಳಿಗೆ ಆದ್ಯತೆ ನೀಡಿ ಮನೆ ಸಂಪರ್ಕ ವ್ಯವಸ್ಥೆಗೆ ಪೂರಕವಾಗಿ ನೀರು ಪೂರೈಕೆ ಮಾಡಲು ಅಗತ್ಯವಿರುವ ಹೆಚ್ಚಳ / ಅಭಿವೃದ್ಧಿ ಯೋಜನೆಗಳನ್ನು ಅಳವಡಿಸಬೇಕು.

- ಕೇಂದ್ರ ಪುರಸ್ಕೃತ ನಿರಂತರತೆ (Sustainability) ಕಾರ್ಯಕ್ರಮದಡಿ ಎಲ್ಲಾ ಮುಂದುವರಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಭೂ ವಿಜ್ಞಾನಿಗಳ ಸಲಹೆ ಮೇರೆಗೆ ವೈಜ್ಞಾನಿಕ ತಳಹದಿಯಲ್ಲಿ ಅಗತ್ಯವಿರುವ ಯೋಜನೆಗಳನ್ನು ಅನುದಾನ ಲಭ್ಯತೆ ಮಿತಿಯೊಳಗೆ ಮಾತ್ರ ಅಳವಡಿಸಬೇಕು.
- ಭಾರತ ಸರ್ಕಾರವು ನೀಡಿರುವ ಪಪತ್ರದಲ್ಲಿ **RFD ಸೂಚ್ಯಾಂಕದೊಂದಿಗೆ IMISನಲ್ಲಿ ಮಾಹಿತಿ** upload ಮಾಡಬೇಕು.
- ಕ್ರಿಯಾ ಯೋಜನೆಯಡಿ ಉದ್ದೇಶಿತ ಕಾಮಗಾರಿಗಳನ್ನು ಅಳವಡಿಸುವಾಗ ಸದರಿ ಯೋಜನೆಗಳ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವ ಗಮನದಲ್ಲಿಟ್ಟುಕೊಳ್ಳಬೇಕು. ಅಂತೆಯೇ, 2013–14ರ ಸಾಲಿನಲ್ಲಿ ಅನುಮೋದನೆಯಾಗಬೇಕಾಗುವ / ಅನುಷ್ಠಾನಕ್ಕೆ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ MVS ಯೋಜನೆಗಳ ಸಂಬಂಧ, ವಾಸ್ತವಿಕವಾಗಿ ಅಗತ್ಯವಿರುವ ಅನುದಾನವನ್ನು ಕಾಯ್ದಿರಿಸಿಕೊಳ್ಳಬೇಕು.
- **SCP/TSP ಹಾಗೂ Minority ಜನವಸತಿಗಳಿಗೆ NRDWP ಮಾರ್ಗಸೂಚಿಗಳನ್ವಯ** ರಾಜ್ಯ ಮತ್ತು ಕೇಂದ್ರ ವಲಯಗಳಡಿ ನಿಗಧಿಪಡಿಸಿರುವ ಮಾನದಂಡಗಳನ್ವಯ ಸೂಕ್ತ ಕ್ರಿಯಾ ಯೋಜನೆಯನ್ನು ಪ್ರತ್ಯೇಕವಾಗಿ ರೂಪಿಸಿ, ಸಾಮಾನ್ಯ C&Q ಘಟಕದ SCP/TSP ಶೀರ್ಷಿಕೆಯಡಿ ಅಳವಡಿಸಬೇಕು.
- ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಕ್ರಿಯಾ ಯೋಜನೆಯ ಗಾತ್ರ **2012–13ರಲ್ಲಿ** ಸಾಧಿಸಿರುವ ಆರ್ಥಿಕ ಮತ್ತು ಭೌತಿಕ ಪ್ರಗತಿ ಮೇಲೆ 10% **ಅಥವಾ** ವಾಸ್ತವಿಕವಾಗಿ ಆಯಾ ಜಿಲ್ಲಾ ಪಂಚಾಯತಿಗಳು ಎಲ್ಲಾ ಜನವಸತಿಗಳಿಗೂ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರು ಪೂರೈಕೆ ಒದಗಿಸುವ ಸಂಬಂಧದ ಮಿತಿಯೊಳಗಿರಬೇಕು. ಈ ಕುರಿತಂತೆ, CE/PRED PREDಗಳಿಗೆ ಈಗಾಗಲೇ ನೀಡಿರುವ ತಾತ್ಕಾಲಿಕ ಆರ್ಥಿಕ ಸೂಚ್ಯಾಂಕವನ್ನು ಗಣನೆಗೆ ತೆಗೆದುಕೊಳ್ಳಬೇಕು.
- 2012-13ರ ಕ್ರಿಯಾ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯವಿರುವ HRD/IEC ಚಟುವಟಿಕಗಳು, MIS ಕ್ರಾರ್ಯಕ್ರಮ, R&D ಕಾರ್ಯಕ್ರಮ, Support Activity ಲ್ಯಾಬೋರೇಟರಿಗಳ ಅಭಿವೃದ್ಧಿ, BRC/CRCಗಳು ಮತ್ತು PMC ಸಂಬಂಧದ **ಹಾಗೂ** ಪೈಲಟ್ ಯೋಜನೆಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ರೂಪಿಸಿ, ಜಿಲ್ಲಾವಾರು ಮತ್ತು ರಾಜ್ಯ ಮಟ್ಟದ ಅನುದಾನದ ಬೇಡಿಕೆಯನ್ನು ದಾಖಲಿಸಬೇಕು.

ಮೇಲ್ಕಂಡ ಪ್ರಕ್ರಿಯೆಗಳನ್ನು ಅನುಸರಿಸಿ, ಸಿದ್ಧಪಡಿಸಿದ ಕ್ರಿಯಾ ಯೋಜನೆಯನ್ನು PREDಗಳು ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲು ರುಜುವಿನೊಂದಿಗೆ **ದಿ:20.4.2013ರೊಳಗೆ CE/PREDಗೆ** ಕಳುಹಿಸಬೇಕು. CE/PREDರವರು ಸದರಿ ಕ್ರಿಯಾ ಯೋಜನೆಯನ್ನು ಚಾಲ್ತಿಯಲ್ಲಿರುವ ಮಾರ್ಗಸೂಚಿಗಳು, ಸರ್ಕಾರದ ನಿರ್ದೇಶನಗಳು ಹಾಗೂ ಅನುದಾನ ಲಭ್ಯತೆ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸದರಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ, ಸರ್ಕಾರಕ್ಕೆ **ದಿ:30.4.2013ರೊಳಗಾಗಿ** 30 ಜಿಲ್ಲಾ ಪಂಚಾಯತಿಗಳು **Appendix-E** ಹಾರ್ಡ್ ಮತು ಸಾಫ್ಟ್ ಕಾಪಿ ಕಳುಹಿಸಬೇಕು. ಹೀಗೆ ಸರ್ಕಾರಕ್ಕೆ ಕಳುಹಿಸುವ ಮುನ್ನ, ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಪ್ರಪತ್ರದಲ್ಲಿ ಸದರಿ ಮಾಹಿತಿ IMISನಲ್ಲಿ upload ಆಗಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಸರ್ಕಾರದಿಂದ ಅನುಮೋದನೆ ದೊರೆತ ನಂತರ ಅಂತಿಮವಾಗಿ ಕೇಂದ್ರ ಸರ್ಕಾರದಿಂದ ಅನುಮೋದಿತ ಕ್ರಿಯಾ ಯೋಜನೆಗೆ online ಮೂಲಕ ಒಪ್ಪಿಗೆ ಪಡೆಯಲು ಕ್ರಮವಹಿಸತಕ್ಕದ್ದೆಂದು ತಿಳಿಸಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ), 1.4.2013

ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಫ್ಯಾಕ್ಸ್:22203175, ಫೋನ್:080–22032806
ಇ–ಮೇಲ್ : rk3452000@yahoo.co.in

ಪ್ರತಿ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
2. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಯೋಜನಾ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
3. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿಗಳು.
4. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು.